'ಇದು ಕಾಸ್ಮೋಪಾಲಿಟನ್ ಸಿಟಿ. ನೀನು ಸಣ್ಣ ಊರಿಂದ ಬಂದವಳು. ಇಲ್ಲಿ ಏಗೋದು ನಿಂಗೆ ಕಷ್ಟ ಆಗಬಹುದು. ಕಾರ್ಪೊರೇಟ್ ಕಂಪನಿಗಳಲ್ಲಿ ಕೆಲಸ ಮಾಡೋದು ಇನ್ನೂ ಕಷ್ಟ. ನಿನ್ನ ಜತೆಯಲ್ಲಿ ಇರೋರು ಹೇಗಿರ್ತಾರೆ ಅನ್ನೋದಕ್ಕಿಂತ ನಿನ್ನ ಬಾಸ್ ಹೇಗಿದ್ದಾನೆ, ಅವನು ಯಾವಾಗ ಹೇಗೆ ಬಿಹೇವ್ ಮಾಡ್ತಾನೆ ಅನ್ನೋದನ್ನು ಜಡ್ಜ್ ಮಾಡೋದನ್ನು ಮೊದಲು ಕಲೀಬೇಕು. ಬೇರೆ ಕೆಲಸ ಸಿಗೋವರೆಗೆ ಅಲ್ಲಿ ಇರೋಕೆ ಅಡ್ಡಿಯಿಲ್ಲ. ಆದರೆ, ಎಲ್ಲರಿಂದಲೂ ಒಂದು ಡಿಸ್ಟೆನ್ಸ್‌ನಲ್ಲಿರೋದು ನಿಂಗೇ ಒಳ್ಳೆಯದು. ನೀನು ಡಿವೋರ್ಸಿ ಅನ್ನೋದು ಯಾರಿಗೂ ಗೊತ್ತಾಗಬಾರದು. ಮುಖ್ಯವಾಗಿ ನಿನ್ನ ಬಾಸ್‌ಗೆ. ಇದನ್ನು ಯಾಕೆ ಹೇಳ್ತೀನಿ ಅಂದರೆ ನನ್ನ ಡಿವೋರ್ಸ್ ಆಗೋದಕ್ಕೆ ಒಬ್ಬ ಬಾಸ್ ಕಾರಣ' ಅಂತ ಅವಳ ಫ್ರೆಂಡೊಬ್ಬಳು ಕೆಲಸಕ್ಕೆ ಸೇರಿಕೊಳ್ಳುವ ಮೊದಲು ಎಚ್ಚರಿಸಿದ್ದಳು.

ಮೂರು ತಿಂಗಳ ಹಿಂದೆ ಡ್ಯೂಟಿ ರಿಪೋರ್ಟ್ ಮಾಡಿಕೊಂಡ ದಿನ ಅವನು ತನ್ನ ಪರಿಚಯ ಹೇಳಿಕೊಳ್ಳುತ್ತ, 'ನಂಗೆ ಮದ್ವೆ ಆಗಿದೆ, ಹೆಂಡ್ತಿ ಹೌಸ್‌ವೈಫ್' ಅಂದಿದ್ದ. ಅವಳು ಗೆಳತಿಯ ಎಚ್ಚರಿಕೆ ಮಾತುಗಳನ್ನು ಮರೆತು, 'ನಾನು ಹಸ್ಬೆಂಡ್ ಜತೆಯಲ್ಲಿಲ್ಲ. ಅಪ್ಪ, ಅಮ್ಮನ ಜತೆ ಇದ್ದೀನಿ' ಅಂದಿದ್ದಳು.

ಇವತ್ತು ಅವನು ಇಂಟರ್‌ಕಾಂನಲ್ಲಿ, 'ನಾಡಿದ್ದು ಆಫೀಸ್ ಕೆಲ್ಸದ ಮೇಲೆ ಮುಂಬೈಗೆ ಹೋಗ್ತೀನಿ, ನೀವೂ ಬನ್ನಿ ಒಂದು ನೈಟ್ ಸ್ಟೇ ಮಾಡಿ ಬರೋಣ' ಅಂದ! ಅವನು ಕರೆದದ್ದು ಯಾರನ್ನ? ಚೇಂಬರಿನಲ್ಲಿ

